

ಕೊಡುತ್ತೀವೆಂದೋ... ಅಥವಾ ಇನ್ನೇನೋ ಹೇಳಿಯೋ ರಾತ್ರಿ ವಾಪಸ್ಸು ಬರುವಂತೆ ಮಾಡಿದ್ದಾರೆ. ಕಾರ್‌ನಲ್ಲಿ ಬರದೆ ವಾಚ್‌ಮನ್ ಕಣ್ತಪ್ಪಿಸಿ ಬರುವುದಕ್ಕೆ ಹೇಳಿ... ಹನ್ನೆರಡು ಗಂಟೆಗೆ ಮೊದಲೇ ಇಬ್ಬರೂ ಸೇರಿ ಅವಳನ್ನು ಸಾಯಿಸಿದ್ದಾರೆ. ಆ ಮೂರೂ ಸಾಕ್ಷಿಗಳ ವೀಕ್ನೆಸ್ ಗೊತ್ತಿದ್ದ ಇವರಿಬ್ಬರೂ ಗಲಾಟೆ ಮಾಡಿದಂತೆ ನಾಟಕ ಆಡಿ, ನಂತರ ಹನ್ನೆರಡು ಗಂಟೆಯ ವೇಳೆಗೆ ಕೊಲೆಯ ನಾಟಕ ಆಡಿದ್ದಾರೆ. ನೆರಳು ಬೆಳಕಿನ ಆಟದಲ್ಲಿ ರವಿಕಾಂತನಿಗೆ ಕೆಳಗೆ ಬಿದ್ದಿರುವ ಶವ ಕಂಡಿಲ್ಲ... ನವೀನ್ ತನ್ನ ಹೆಂಡತಿಗೆ ಚಾಕು ಚುಚ್ಚಿದ ನಾಟಕ ಆಡಿ ಮನೆಯೊಳಗೆ ಸೇರಿದ್ದಾನೆ. ನಂತರ ಅಮಾಯಕರಂತೆ ನಿಮ್ಮ ಮುಂದೆ ನಾಟಕ ಆಡಿದ್ದಾರೆ."

"ಸರ್ ಇದೆಲ್ಲಾ ನಿಮಗೆ ಹೇಗೆ ಗೊತ್ತಾಯಿತು?"

"ಕೇಸ್‌ನ ವಿಷಯ ಮಾತಾಡುವುದಕ್ಕೆ ಬಂದಾಗ ಸುನಂದಾ ನನಗೆ ಈ ಮೂವರ ಹೇಳಿಕೆಗಳಲ್ಲಿ ಇರುವ ಲೂಪ್ ಹೋಲ್ ಬಗ್ಗೆ ಹೇಳಿದಳು. ಕ್ರಿಮಿನಲ್ ಲಾಯರ್ ಆದ ನನಗೇ ಹೊಳೆಯದ್ದು ಇವಳಿಗೆ ಹೇಗೆ ತಿಳಿಯಿತು ಎಂದು ಹುಡುಕ ಹೊರಟಾಗ ಎಲ್ಲ ಸತ್ಯ ತೆರೆದುಕೊಂಡಿತು. ನೀನು ಮತ್ತೆ ಸರಿಯಾದ ಸಾಕ್ಷಿಗಳನ್ನು ಕಲೆಹಾಕಿ ಅವರಿಗೆ ಶಿಕ್ಷೆ ಕೊಡಿಸಬೇಕು."

"ಸರ್, ಅವರಿಗೆ ಶಿಕ್ಷೆ ಆದರೆ ನಿಮ್ಮ ಕೊನೆಯ ಕೇಸ್ ಸೋಲಿನೊಂದಿಗೆ ಮುಕ್ತಾಯ ಆಗುತ್ತದೆ ಅಲ್ಲವಾ?"

"ಆಗ ಅದು ಬೇರೆಯದ್ದೇ ಕೇಸ್ ಆಗುತ್ತದೆ. ಅಲ್ಲಿ ಶ್ರೀರಂಗಾಚಾರ್ ಪ್ರತಿವಾದಿಯಲ್ಲ. ಅವರು ಕೇಸ್ ಗೆದ್ದಾಗಿದೆ. ಹೊಸ ಕೇಸ್... ಹೊಸ ಸಾಕ್ಷಿಗಳು ಸೊ... ನನ್ನ ಪ್ರತಿಷ್ಠೆಗೆ ಭಂಗ ಬರುವುದಿಲ್ಲ... ಅಷ್ಟಕ್ಕೂ ನ್ಯಾಯಾಲಯ ಅವರನ್ನು ಕೇವಲ ಸಾಕ್ಷಾಧಾರಗಳ ಕೊರತೆಯಿಂದ ಅಪರಾಧಿ ಎಂದು ತೀರ್ಮಾನಿಸಲಾಗದೆ ಬಿಡುಗಡೆ ಮಾಡಿರುವುದು... ನಿರ್ದೋಷಿ ಅಂತ ಅಲ್ಲ."

"ಸರ್ ಹೀಗೆ ಮಾಡಿದುದರ ಉದ್ದೇಶ?"

"ತಿಳಿದೂ ಒಬ್ಬ ಅಪರಾಧಿಯನ್ನು ನಿರಪರಾಧಿ ಎಂದು ಪ್ರೂವ್ ಮಾಡಿದರೆ, ನ್ಯಾಯದೇವತೆಯ ಮುಂದೆ ನಾನೊಬ್ಬ ಅಪರಾಧಿಯಾಗುವೆ. ಆ ತಪ್ಪಿತಸ್ಥಭಾವ, ಪಾಪಪ್ರಜ್ಞೆ ನನ್ನ ವಿಶ್ರಾಂತ ಜೀವನದಲ್ಲಿ ಕಾಡುವುದು ಬೇಡ ಅಂತ."

ನಿಧಾನವಾಗಿ ಎದ್ದು ಕಬೋರ್ಡ್‌ನಿಂದ ಒಂದು ದೊಡ್ಡ ಕವರ್ ತೆಗೆದು ಭೂಷಣ್ ಕೈಗಿಡುತ್ತಾ, "ಇದರಲ್ಲಿ ಕೇಸ್‌ಗೆ ಬೇಕಾದ ಸಾಕ್ಷ್ಯಾಧಾರಗಳಿವೆ... ಮುಂದಿನದು ನಿನ್ನ ಕೆಲಸ."

"ಖಂಡಿತಾ ಸರ್... ಈ ಬಾರಿ ಫುಲ್ ಪ್ರೂಫ್ ಕೇಸ್ ತಯಾರು ಮಾಡುತ್ತೇನೆ ಎನ್ನುವ ಭರವಸೆ ಕೊಡುತ್ತೇನೆ" ಎಂದು ಭೂಷಣ್ ಶ್ರೀರಂಗಾಚಾರ್ ಅವರ ಕೈ ಕುಲುಕುತ್ತಾ ಮೇಲೆದ್ದ.

**ವಾಸುದೇವ ಮೂರ್ತಿ ಪಿ.**

ಹುಟ್ಟಿದ ಊರು ಶಿವಮೊಗ್ಗ. ಸಿವಿಲ್ ಎಂಜಿನಿಯರ್ ಆಗಿರುವ ಅವರು ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೆದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೆದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿಕೊಂಡಿದೆ. ಇತ್ತೀಚೆಗೆ ಅವರ ಪತ್ತೆದಾರಿ ಕತೆಗಳ ಸಂಕಲನ 'ದಿ ಪರ್ಫೆಕ್ಟ್ ಮರ್ಡರ್' ಪ್ರಕಟವಾಗಿದೆ.